ಭಾಗ್ಯಲಕ್ಷ್ಮಿ ಬಾಂಡ್ ವಿತರಣೆ

311 : (383)

ಶ್ರೀ ನರೇಂದ್ರ ಬಾಬು ನೆ.ಲ

ಅ) ಕಳೆದ 3 ವರ್ಷಗಳಲ್ಲಿ ಮಹಾಲಕ್ಷ್ಮಿ ಲೇಔಟ್ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ 07 ವಾಡ್‌ಗಳಿಂದ ಭಾಗ್ಯಲಕ್ಷ್ಮಿ ಯೋಜನೆಯಡಿ ಬಾಂಡ್ ವಿತರಣೆಗೆ ಸ್ವೀಕರಿಸಿರುವ ಅರ್ಜಿಗಳ ಸಂಖ್ಯೆ ಎಷ್ಟು ; (ವರ್ಷವಾರು ವಿವರ ನೀಡುವುದು)

ಆ) ಸ್ವೀಕರಿಸಿದ ಅರ್ಜಿಗಳಲ್ಲಿ ವಿತರಣೆ ಮಾಡಲಾದ ಬಾಂಡ್‌ಗಳ ಸಂಖ್ಯೆ ಎಷ್ಟು ; (ವರ್ಷವಾರು ಮಾಹಿತಿ ನಿಡುವುದು)

ಇ) ಭಾಗ್ಯಲಕ್ಷ್ಮಿ ಬಾಂಡ್‌ಗಳ ವಿತರಣೆಯಲ್ಲಿ ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ

ಈ) ಬಂದಿದ್ದಲ್ಲಿ ಸರ್ಕಾರ ಈ ಬಗ್ಗೆ ತೆಗೆದುಕೊಂಡ ಕ್ರಮಗಳೇನು;

ಉ) ಭಾಗ್ಯಲಕ್ಷ್ಮಿ ಬಾಂಡ್ ಪಡೆಯಲು ವಿಧಿಸಲಾಗಿರುವ ಷರತ್ತುಗಳೇನು ; (ವಿವರ ನೀಡುವುದು)

ಊ) ಬಿ.ಪಿ.ಎಲ್. ಕಾರ್ಡ್ ಹೊಂದಿಲ್ಲ ಎಂಬ ಕಾರಣದಿಂದ ಹೆಣ್ಣು ಮಕ್ಕಳಿಗೆ ಭಾಗ್ಯಲಕ್ಷ್ಮಿ ಬಾಂಡ್ ನಿರಾಕರಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಋ) ಹಾಗಿದ್ದಲ್ಲಿ, ಇದನ್ನು ಸರಿಪಡಿಸಿ ಬಡ ಕುಟುಂಬದ ಹೆಣ್ಣು ಮಕ್ಕಳಿಗೆ ಭಾಗ್ಯಲಕ್ಷ್ಮಿ ಬಾಂಡ್ ಪಡೆಯಲು ಸರ್ಕಾರ ರೂಪಿಸಿರುವ ಮಾರ್ಗಸೂಚಿಗಳೇನು?

ಶ್ರೀ ಕಳಕಪ್ಪ ಜಿ.ಬಂಡಿ

(ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು)

ಅ) ಕಳೆದ 3 ವರ್ಷಗಳಲ್ಲಿ ಮಹಾಲಕ್ಷ್ಮಿ ಲೇಔಟ್ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಭಾಗ್ಯಲಕ್ಷ್ಮಿ ಯೋಜನೆಯಡಿ ಬಾಂಡ್ ವಿತರಣೆಗೆ ಸ್ವೀಕರಿಸಿರುವ ಅರ್ಜಿಗಳ ಸಂಖ್ಯೆ (ವರ್ಷವಾರು) ವಿವರ ಕೆಳಗಿನಂತಿದೆ.

ಕ್ರ.ಸಂ	ವಾಡ್ ಹೆಸರು	2009-10	2010-11	2011-12
1	ನಂದಿನಿಲೇಔಟ್	103	90	25
2	ಮಹಾಲಕ್ಷ್ಮಿಪುರಂ	418	416	20
3	ಶಕ್ತಿಗಣಪತಿನಗರ	245	110	39
4	ಶಂಕರಮಠ	95	139	10

5	ನಾಗಮರ	100	50	0
6	ಮಾರಪ್ಪನಪಾಳ್ಯ	03	0	0
7	ವೃಷಭಾವತಿಪಾಳ್ಯ	0	0	0
	ಒಟ್ಟು	**964**	**805**	**94**

ಆ) ಸ್ವೀಕರಿಸಿದ ಅರ್ಜಿಗಳಲ್ಲಿ ವಿತರಣೆ ಮಾಡಲಾದ ಬಾಂಡ್‌ಗಳ ಸಂಖ್ಯೆ (ವರ್ಷವಾರು) ವಿವರ ಕೆಳಗಿನಂತಿದೆ.

ಕ್ರ.ಸಂ	**ವಾರ್ಡ್ ಹೆಸರು**	**2009-10**	**2010-11**	**2011-12**
1	ನಂದಿನಿಲೇಔಟ್	93	89	05
2	ಮಹಾಲಕ್ಷ್ಮಿಪುರಂ	403	373	02
3	ಶಕ್ತಿಗಣಪತಿನಗರ	230	110	10
4	ಶಂಕರಮಠ	85	137	02
5	ನಾಗಮರ	90	24	0
6	ಮಾರಪ್ಪನಪಾಳ್ಯ	03	0	0
7	ವೃಷಭಾವತಿಪಾಳ್ಯ	0	0	0
	ಒಟ್ಟು	**904**	**733**	**19**

ಟಿಪ್ಪಣಿ : 2009-10ನೇ ಸಾಲಿನಲ್ಲಿ 964 ಅರ್ಜಿಗಳನ್ನು ಸ್ವೀಕರಿಸಿದ್ದು 904 ಬಾಂಡ್‌ಗಳನ್ನು ವಿತರಿಸಲಾಗಿದೆ. ಉಳಿದ 60 ಅರ್ಜಿಗಳನ್ನು ಅಪೂರ್ಣ ದಾಖಲಾತಿ ಸಲ್ಲಿಸಿದ ಕಾರಣ ತಿರಸ್ಕರಿಸಲಾಗಿದೆ. 2010-11ನೇ ಸಾಲಿನಲ್ಲಿ 805 ಅರ್ಜಿಗಳನ್ನು ಸ್ವೀಕರಿಸಿದ್ದು 733 ಬಾಂಡ್‌ಗಳನ್ನು ವಿತರಿಸಲಾಗಿದೆ. ಉಳಿದ 72 ಅರ್ಜಿಗಳನ್ನು ಅಪೂರ್ಣ ದಾಖಲಾತಿ ಸಲ್ಲಿಸಿದ ಕಾರಣ ತಿರಸ್ಕರಿಸಲಾಗಿದೆ. 2011-12ನೇ ಸಾಲಿನ ಅರ್ಜಿಗಳಿಗೆ ಬಾಚಿಡ್ ವಿತರಣೆ ಇನ್ನು ಪ್ರಗತಿಯಲ್ಲಿದೆ.

ಇ) ಭಾಗ್ಯಲಕ್ಷ್ಮಿ ಯೋಜನೆಯಡಿ ಅನುದಾನದ ಲಭ್ಯತೆಯ ಆಧಾರದ ಮೇಲೆ ಹಂತ ಹಂತವಾಗಿ ಬಾಂಡ್‌ಗಳನ್ನು ಮುದ್ರಿಸಿ ವಿತರಿಸಲು ಕ್ರಮ ವಹಿಸಲಾಗುತ್ತಿದೆ.

ಈ) 2012-13ನೇ ಸಾಲಿನಲ್ಲಿ ರೂ.250/- ಕೋಟಿ ಹೆಚ್ಚುವರಿ ಆಯವ್ಯಯ ಪಡೆದು 2010-11ನೇ ಸಾಲಿನ ವರೆಗೆ ಜನಿಸಿದ ಫಲಾನುಭವಿಗಳಿಗೆ ಬಾಂಡ್ ವಿತರಿಸಲಾಗಿದೆ.

ಉ) ಭಾಗ್ಯಲಕ್ಷ್ಮಿ ಯೋಜನೆಯಡಿ ಬಾಂಡ್ ಪಡೆಯಲು ವಿಧಿಸಲಾಗಿರುವ ಷರತ್ತುಗಳು ಈ ಕೆಳಕಂಡಂತಿದೆ.

- ಹೆಣ್ಣು ಮಗು ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳಲ್ಲಿ ಜನಿಸಿರಬೇಕು.

• ಕುಟುಂಬವು ಕುಟುಂಬದ ಮುಖ್ಯಸ್ಥನ ಭಾವಚಿತ್ರ ಅಥವಾ ಕುಟುಂಬ ಸದಸ್ಯರ ಹೆಸರು ಇರುವ ಬಿಪಿಎಲ್ ಕಾಡ್‌ನ್ನು ಕಡ್ಡಾಯವಾಗಿ ಹೊಂದಿರಬೇಕು.

• ಮಗುವಿನ ಜನನ ನೋದಣಿ ಪ್ರಮಾಣ ಪತ್ರವನ್ನು ಹೊಂದಿರಬೇಕು.

• ಆರೋಗ್ಯ ಇಲಾಖೆಯ ಕಾರ್ಯಕ್ರಮದಂತೆ ರೋಗನಿರೋಧಕ ಚುಚ್ಚುಮದ್ದನ್ನು ಹಾಕಿಸಿರಬೇಕು.

• ಕುಟುಂಬದ ಎರಡು ಹೆಣ್ಣುಮಕ್ಕಳು ಮಾತ್ರ ಈ ಸೌಲಭ್ಯವನ್ನು ಪಡೆಯಲು ಸೀಮಿತಗೊಳಿಸಲಾಗಿದೆ.

ಈ ಕುಟುಂಬದ ಮಗುವಿನ ತಾಯಿ ಅಥವಾ ತಂದೆ ಯಾರಾದರೊಬ್ಬರು ಶಾಶ್ವತ ಕುಟುಂಬ ಯೋಜನೆಯ ಪದ್ಧತಿಯನ್ನು ಅಳವಡಿಸಿ ಕೊಂಡಿದ್ದು, ಒಟ್ಟು ಮೂರು ಮಕ್ಕಳನ್ನು ಮೀರಿರಕೂಡದು.

ಊ) ಹೌದು,

ಋ) ಯೋಜನೆಯು ಬಿಪಿಎಲ್ ಕಾರ್ಡ್ ಹೊಂದಿದವರಿಗೆ ಮಾತ್ರ ಅನ್ವಯಿಸುತ್ತದೆ.

• ಒಂದು ವೇಳೆ ಅರ್ಹ ಫಲಾನುಭವಿಗಳು ಬಿಟ್ಟು ಹೋಗಿದ್ದಲ್ಲಿ ಅವರಿಗೆ ಬಿಪಿಎಲ್ ಕಾರ್ಡ್ ಒದಗಿಸಲು ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಗೆ ಕೋರಲಾಗಿದೆ.

ಪ್ರಥಮ ದರ್ಜೆ ಕಾಲೇಜುಗಳ ಮಂಜೂರಾತಿ

298 : (390)

ಶ್ರೀ ಖಾದರ್ ಯು.ಟಿ.

ಅ) ಕಳೆದ ಮೂರು ವರ್ಷಗಳಿಂದ ರಾಜ್ಯದಲ್ಲಿ ಎಷ್ಟು ಪ್ರಥಮ ದರ್ಜೆ ಕಾಲೇಜುಗಳ ಸ್ಥಾಪನೆಗೆ ಅನುಮತಿ ನೀಡಲಾಗಿದೆ (ವಿವರ ಒದಗಿಸುವುದು);

ಆ) ಮಂಗಳೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಯಾವುದೇ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಇಲ್ಲದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ, ಮಂಗಳೂರು ವಿಧಾನಸಭಾ ಕ್ಷೇತ್ರ ಯಾವ ಪ್ರದೇಶದಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಪ್ರಾರಂಭಿಸಲಾಗುವುದು?